[ Govt. of Karnataka C.R.P. 67]

| Deposition Sheets (RP.No.57) Form No.4 |
|---|

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 12/15**

ಪಿ.ಡಬ್ಲ್ಯು : 2 ಸಿ.ಡಬ್ಲ್ಯು : 3

ಸಾಕ್ಷಿದಾರನ ಹೆಸರು : ನಿತ್ಯಾನಂದ ಮಲ್ಯ
ತಂದೆಯ ಹೆಸರು : ಲಕ್ಷಣ ಮಲ್ಯ
ಪ್ರಾಯ : 63 ವರ್ಷ
ಉದ್ಯೋಗ : ವ್ಯಾಪಾರ
ವಾಸ : ಮೂಡಬಿದ್ರಿ

ದಿನಾಂಕ 09-12-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಚಾಸಾ-1 ನನ್ನ ತಂಗಿ, ಚಾಸಾ-2 ನನ್ನ ತಾಯಿ, ಚಾಸಾ-4 ಮತ್ತು 5 ತಂಗಿಯಂದಿರು, ಚಾಸಾ-6 ತಮ್ಮ, ಚಾಸಾ-7 ತಂಗಿ. ಆರೋಪಿ ನನ್ನ ತಮ್ಮ. ದಿಃ 14-11-2001 ರಲ್ಲಿ ನನ್ನ ತಂದೆ ಲಕ್ಷಣ ಮಲ್ಯ ಮೃತಪಟ್ಟಿರುತ್ತಾರೆ. ಚಾಸಾ-1 ರವರನ್ನು ಸುರೇಶ್ ಕುಡ್ವ ಎಂಬುವವರೊಂದಿಗೆ ಮದುವೆ ಮಾಡಿ ಕೊಟ್ಟಿರುತ್ತೇವೆ. ನನ್ನ ಮತ್ತು ನನ್ನ ಅಕ್ಕ-ತಂಗಿ ತಮ್ಮನ ನಡುವೆ ಯಾವುದೇ ಸ್ತಿರಾಸ್ತಿ ಜಂಟಿಯಾಗಿ ಇರಲಿಲ್ಲ. ಹಿರಿಯ ಸಿವಿಲ್ ನ್ಯಾಯಲಯದಲ್ಲಿ ದಾವೆ ಸಂಖ್ಯೆ 11/2009 ಯಾವ ವಿಷಯಕ್ಕಾಗಿ ದಾಖಲಾಗಿತ್ತು ಎಂದರೆ ವಿಲ್ ಅನ್ನು ಪ್ರಶ್ನಿಸಿ ದಾವೆ ಮಾಡಿರುತ್ತೇವೆ. ನನ್ನ ತಂದೆ, ನನಗೆ ಮತ್ತು ನನ್ನ ತಮ್ಮಂದಿರು ಮೂರು ಜನರಿಗೆ ಬರೆದುಕೊಟ್ಟ ವಿಲ್ ಫೋರ್ಜರಿ ಆಗಿರುತ್ತದೆ ಎಂದು ಚಾಸಾ 1 ರವರು ವಿಲ್ ಅನ್ನು ಪ್ರಶ್ನಿಸಿ ದಾವೆ ಮಾಡಿರುತ್ತಾರೆ. ನನ್ನ ತಂಗಿ ಮತ್ತು ನನ್ನ ತಮ್ಮನ ನಡುವೆ ಎ ಸಿ ಕೋರ್ಟ್ ನಲ್ಲಿ ಅಫೀಲು ಇದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪುಷ್ಪ ಪಾಂಡುರಂಗರವರ ರವರ ಪರಿಚಯ ಇಲ್ಲ. ಈ ಪ್ರಕರಣದ ಕುರಿತು ನನಗೆ ಮಾಹಿತಿ

ಇರುವುದಿಲ್ಲ. ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನನ್ನ ತಮ್ಮ ಅರೋಪಿ ವಿವೇಕನಂದ ಮಲ್ಯನ ಸಹಿಯನ್ನು ಗುರುತಿಸಲಾಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲು</u> : <u>ಸಹಾಯಕ ಸರ್ಕಾರಿ ಅಭಿಯೋಜಕರು:-</u>

2 ದಿಃ 15.10.2013 ರಂದು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಮ್ಮ ತಂದೆ 14.11.2001 ರಂದು ತೀರಿಕೊಂಡ ನಂತರ ಫೆಬ್ರವರಿ 2002 ರಲ್ಲಿ ಆರೋಪಿ ಕಾರ್ಕಳ ಗ್ರಾಮ ಸರ್ವೇ ನಂ.92/1 ಎ(2) ಮತ್ತು 92/2 ಬಿ ಜಮೀನಿನ ಪಹಣಿ ಪತ್ರಿಕೆಯನ್ನು ನಮಗೆ ತಿಳಿಯದಂತೆ ಕಾನೂನು ಬಹಿರವಾಗಿ ಅವನ ಹೆಸರಿಗೆ ಮಾಡಿಕೊಂಡಿರುವ ವಿಷಯ ತಿಳಿದು ನಾವು ಕುಂದಾಪುರ ಸಹಾಯಕ ಕಮೀಷನರ್ ಗೆ ಅಫೀಲು ಮಾಡಿದ್ದು ಆಫೀಲಿನಲ್ಲಿ ಯಾಥ ಸ್ತಿತಿಯಲ್ಲಿ ಕಾಯ್ದುಕೊಂಡು ಬರುವಂತೆ ಮತ್ತು ಪರಬಾಹೆ ಮಾಡದಂತೆ ಅದೇಶವನ್ನು ನೀಡಿರುತ್ತಾರೆ. ನಂತರ 27-10-2004 ರಂದು ಸಹಾಯಕ ಕಮೀಷನರ್ ಸದರಿ ಜಮೀನಿಗೆ ಎಲ್ಲಾ ವಾರಸುದಾರರ ಹೆಸರನ್ನು ನೊಂದಾಯಿಸುವಂತೆ ಆದೇಶಿಸಿರುತ್ತಾರೆ. ಹೀಗಿರುವಾಗ ಸದರಿ ಅದೇಶವನ್ನು ಜಿಲ್ಲಾಧಿಕಾರಿಗಳು 15-10-2005 ರಂದು ತಮ್ಮ ಅದೇಶವನ್ನು ಸರ್ಮಥಿಸಿರುತ್ತಾರೆ. ಹೀಗಿರುವಾಗ ದಿಃ 28-05-2002 ರಂದು ಮಂಗಳೂರಿನ ಯ ಕೋ ಬ್ಯಾಂಕ್ ನಿಂದ ವಿವೇಕ ನಂದ ಮಲ್ಯ ಮತ್ತು ಕಂಪನಿ ಅಲಂಗಾರು ಮೂಡಬಿದ್ರಿ ಎಂಬ ಹೆಸರಿನಲ್ಲಿ ಸಾಲವನ್ನು ಬ್ಯಾಂಕ್

ನಿಂದ ಪಡೆದುಕೊಂಡು ಸಾಲದ ಭದ್ರತೆಗಾಗಿ ಮೇಲೆ ಹೇಳಿದ ಜಮೀನನ್ನು ಆಧಾರವಾಗಿ ಇಟ್ಟಿರುವ ವಿಷಯ ಸಿವಿಲ್ ನಾ್ಯಯಾಲಯದಲ್ಲಿ ವಿಚಾರಣೆಯಲ್ಲಿ ಇದ್ದ ದಾವೆ 11/09 ವಿಚಾರಣೆ ಸಮಯದಲ್ಲಿ ನ್ಯಾಯಾಲಯಕ್ಕೆ ಯು ಕೋ ಬ್ಯಾಂಕಿನವರು ವ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳಿಂದ ತಿಳಿದು ಬಂದಿರುತ್ತದೆ. ಬ್ಯಾಂಕ್ ನವರು ಮಾನ್ಯ ನ್ಯಾಯಾಲಯಕ್ಕೆ ಹಾಜರುಡಿಸಿದ ದಾಖಲೆಗಳಲ್ಲಿ ತಂಗಿ ವಿದ್ಯಾ ಮತ್ತು ಆಕೆಯ ಗಂಡ ವಾಸವಿದ್ದ ಕಾರ್ಕಳ ಗ್ರಾಮಾ ಜಮೀನು ಸರ್ವೆ ನಂ. 92/1 ಎ ಅಲ್ಲಿ ಮತ್ತು 92/2 ಬಿ ಯಲ್ಲಿರುವ ಜಮೀನನ್ನು ಮಾನ್ಯ ತಾಲೂಕು ದಂಡಾಧಿಕಾರಿಗಳು ತಮ್ಮ ಆದೇಶದಂತೆ ಭೂ ಪರಿವರ್ತನೆ ಮಾಡಿದ ಬಗ್ಗೆ ಇರುವ ಹಿಂಬರಹದ ಯಾಥಾ ನಕಲು ಪ್ರತಿಯ ನೋಟರಿ ಮಾಡಿದ ದೃಢಿಕೃತ ನಕಲು ಮತ್ತು ಆರೋಪಿತನು ಯು ಕೋ ಬ್ಯಾಂಕಿನಿಂದ ಸಾಲ ಪಡೆಯಲು ಸದರಿ ಎ ಎಲ್ ಎನ್ ಸಿ ಆರ್ ನಂ. 108/88/89 ದಿಃ 28-09-1998 ರ ಭೂ ಪರಿವರ್ತನ ಆದೇಶದ ಯಥಾ ನಕಲನ್ನು ತನ್ನ ಸ್ವಂತ ಲಾಭಕ್ಕಾಗಿ ನಕಲಿ ಸೃಷ್ಟಿಸಿ ತಯಾರು ಮಾಡಿ ಬ್ಯಾಂಕಿಗೆ ನೀಡಿ ಸಾಲ ಪಡೆದಿರುವ ದಾಖಲೆಯಾಗಿರುತ್ತದೆ ಸದರಿ ಆದೇಶವು ಪುಷ್ಪ ಪಾಂಡುರಂಗ ಮಾರ್ಪಾಡಿ ಗ್ರಾಮ ಮೂಡಬಿದ್ರಿ ಎಂಬುವವರಿಗೆ ಸೇರಿದ ಸರ್ವೇ ನಂ. 179 ಕ್ಕೆ ಸಂಬಂಧಿಸಿರುದಾಗಿದೆ ಎಂದು ನಂತರ ತಿಳಿದು ಬಂದಿರುತ್ತದೆ. ಸರ್ವೇ ನಂ. 92/1 ಎ ಮತ್ತು 92/2 ಬಿ ಸ್ತಿರಾಸ್ತಿ ಕೃಷಿ ಭೂ ಮಿ ಯಾಗಿದ್ದು ಈ ತನಕ ಭೂ ಪರಿವರ್ತನೆ ಆಗಿರುವುದಿಲ್ಲ.

<u>ಪಾಟೀ ಸವಾಲು ಃ</u> ಆರೋಪಿ ಪರ ಃ ಶ್ರೀ ಎಸ್ ಬಿ ಕೆ ವಕೀಲರಿಂದ ಃ ಏನು ಇಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ

PW 1 to 4 completly turned hostile to the case of prosecution. Hence no purpose will be served by issuance of summons to CW 5 to 10. Hence by rejecting the prayer of learned APP evidence of CW 5 to 10 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed and posted for compliance Under 437A and Arguments.

Call on 26-09-2022.

II Addl. Civil Judge & JMFC.
Karkala (c/c)

Learned APP filed memo praying to issue s/s to the CW6 to 12. As the eye witness and mahazar witness PW1 to 5 have completly turned hostile to the case of prosecution. Hence no purpose will be served by issuance of summons to CW6 to 12. Hence by rejecting the prayer of learned APP evidence of CW6 to 12 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed.

For compliance and Arguments.

Call on : 24-11-2022.

Prl. Civil Judge & JMFC.
Karkala

Learned APP filed memo, praying to issue s/s to the CW 14 to 16. As the Pw 1 and 2 have completly turned hostile to the case of prosecution and Hence no purpose will be served by issuance of summons to CW 14 to 16. Hence by rejecting the prayer of learned APP

evidence of CW14 to 16 are dropped and closed prosecution side evidence.

As there are no incriminating evidences against the accused recording of 313 statement is dispensed and posted for compliance Under 437A and Arguments.

Call on : 18.08.2022.

Prl. Civil Judge & JMFC.
Karkala